ಶ್ರೀ ಎನ್. ಎ. ಚನ್ನೇ ಗೌಡ.—ಪ್ರಾರಂಭ ಮಾಡಿದ ಕೆಲಸವನ್ನು ಅರ್ಧಂಬರ್ಧ ಮಾಡಿ ನಿಲ್ಲಿಸುವುದಕ್ಕೆ ಮುಖ್ಯ ಕಾರಣ ಅಂದಾಜು ಮಾಡುವಾಗ ಒಂದು ಎಕರೆಗೆ ಇಂತಿಷ್ಟು ದುಡ್ಡು ಖರ್ಚು ಮಾಡಬೇಕು ಎನ್ನುವ ಆಧಾರದ ಮೇರೆ ಮಾಡುತ್ತಾರೆ. ಅದರ ಪ್ರಕಾರ ಕೆಲಸ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆ ಪೊತ್ರವನ್ನು ಜಾಸ್ತಿ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ?

ಶ್ರೀಮತಿ ಬನವರಾಜೇಶ್ವರಿ.—ಈಗಾಗಲೇ ಅದನ್ನು ರಿವೈಸ್ ಮಾಡಿದೆ. ರೆಸ್ಟೋರೇಷನ್‌ಗೆ 750 ರೂಪಾಯಿ ಇದ್ದುದನ್ನು 1,000ಕ್ಕೆ ಹೆಚ್ಚಿಸಲಾಗಿದೆ ಮತ್ತು ಹೊಸ ಕೆಲಸಗಳಿಗೆ 1,000 ರೂಪಾಯಿ ಇದ್ದುದನ್ನು 1,200 ರೂಪಾಯಿ ಮಾಡಿದೆ.

ಶ್ರೀ ಡಿ. ಎಂ. ಸಿದ್ದಯ್ಯ.—ಚಾಮರಾಜನಗರ ತಾಲ್ಲೂಕಿನಲ್ಲಿ 17 ಕೆಲಸಗಳನ್ನು ತೆಗೆದುಕೊಂಡಿದ್ದೇವೆಂದು ಹೇಳಿದ್ದಾರೆ. ಇವೆಲ್ಲ ದೊಡ್ಡ ದೊಡ್ಡ ಕೆಲಸಗಳು, ಬಹಳ ಸಂತೋಷ. ಪಕ್ಕದ ತಾಲ್ಲೂಕಾದ ಯಳಂದೂರಿನಲ್ಲಿ ಗೌಡಹಳ್ಳಿ ಕೆರೆ ಕೆಲಸ ಆಗಬೇಕಾಗಿದೆ. ಅದನ್ನೂ ಮಂಜೂರು ಮಾಡಿ ಈ ಕೆಲಸಗಳ ಜೊತೆಗೆ ತೆಗೆದುಕೊಳ್ಳುವ ಯೋಚನೆ ಮಾಡುತ್ತೀರಾ ?

ಶ್ರೀಮತಿ ಬನವರಾಜೇಶ್ವರಿ.—ಪಕ್ಕದ ತಾಲ್ಲೂಕು ವಿಚಾರ ನನ್ನ ಮುಂದೆ ಇಲ್ಲ.

ಶ್ರೀ ಎಸ್. ಪುಟ್ಟಸ್ವಾಮಿ.—ಯಡಿಯೂರು ಅಡ್ಡ ಹಳ್ಳ ಮತ್ತು ಬೆಲ್ಲತನಾನೆ ಹಳ್ಳ ಇವೆರಡಕ್ಕೂ ಬೇಕಾಗಿರುವ ಜಮೀನನ್ನು ಬೇಗ ತೆಗೆದುಕೊಂಡು, ನಿಂತಿರತಕ್ಕ ಕೆಲಸಗಳನ್ನು ಪ್ರಾರಂಭ ಮಾಡಿ ನಿಗದಿಯಾದ ಕಾಲಕ್ಕೆ ಮುಗಿಸುವುದಕ್ಕೆ ಪ್ರಯತ್ನ ಮಾಡಲಾಗುವುದೇ ಸ್ವಾಮಿ ?

ಶ್ರೀಮತಿ ಬನವರಾಜೇಶ್ವರಿ.—ನಿಗದಿಯಾದ ವೇಳೆಗೆ ಮುಗಿಸಬೇಕು ಎನ್ನುವುದೇ ಸರ್ಕಾರದ ಆಶಯ.

Construction of Dam and Canal at Narayanpur under Upper Krishna Project.

689. **Sri BAPU GOWDA** (Shahpur).—

Will the Chief Minister be pleased to state :—

(*a*) the amount provided in the year 1968-69 for the Upper Krishna Project ;

(*b*) Whether tenders for construction of Dam as well as tenders for construction of 7 miles canal at Narayanpur have been called for, if so, when the tenders have been called for ;

(*c*) the date of approval of the tenders ;

(*d*) the total estimated cost of the tenders called for ;

(*e*) the expenditure incurred so far ?

Sri D. PARAMESHWARAPPA (Deputy Minister for Major Irrigation and Electricity) [on behalf of SRI VEERENDRA PATIL (Chief Minister)].—

(*a*) Rs. 50.00 lakhs.

(*b*) Yes, June 1968.

(*c*) 30-12-1968 in respect of Right Bank and Left Bank earthen Dam only.

(*d*) Rs. 1,186.43 lakhs.

(*e*) Nil.

ಶ್ರೀ ಬಾಪು ಗೌಡ.—ಡ್ಯಾಂ ಮತ್ತು ಕೆನಾಲ್ ಮತ್ತು ಮೇಸನರಿ ಡ್ಯಾಂ ಈ ಕಾಮಗಾರಿಗಳಿಗೆಲ್ಲ ಜೆಂಡರುಗಳನ್ನು ಕರೆಯಲಾಗಿದೆಯೇ ಹೇಗೆ ?

ಶ್ರೀ ಡಿ. ಪರಮೇಶ್ವರಪ್ಪ.—ಈಗಾಗಲೇ ರೈಟ್ ಮತ್ತು ಲೆಫ್ಟ್ ಬ್ಯಾಂಕ್ ಕೆನಾಲ್‌ಗಳ ಅರ್ದನ್ ಡ್ಯಾಂಗೆ ಮತ್ತು ಮೇಸನರಿ ಡ್ಯಾಂಗೆ ಟೆಂಡರುಗಳನ್ನು ಕರೆಯಲಾಗಿದೆ. ಅರ್ದನ್ ಡ್ಯಾಂ ಟೆಂಡರುಗಳನ್ನು ಅಕ್ಸೆಪ್ಟ್ ಮಾಡಿಕೊಂಡು ಕೆಲಸ ಪ್ರಾರಂಭ ಮಾಡಬೇಕು ಎನ್ನುವ ಹಂತದಲ್ಲಿದ್ದೇವೆ. ಮೇಸನರಿ ಡ್ಯಾಂ ಬಗ್ಗೆ ಇನ್ನೂ ಟೆಂಡರುಗಳು ಅಕ್ಸೆಪ್ಟ್ ಆಗಿಲ್ಲ.

ಶ್ರೀ ಬಾಪು ಗೌಡ.—9 ಜನರಿಂದ ಬಂದಿರುವ ಟೆಂಡರನ್ನು ವಿಲೇವಾರಿ ಮಾಡುವುದರಲ್ಲಿ ನಿಧಾನವಾಗಿರುವುದರಿಂದ ತೊಂದರೆಯಾಗುವುದಿಲ್ಲವೆ ?

ಶ್ರೀ ಡಿ. ಪರಮೇಶ್ವರಪ್ಪ.—ಅದಷ್ಟು ಜಾಗ್ರತೆ ಇತ್ಯರ್ಥಮಾಡಬೇಕೆಂದೇ ಇರುವುದು. ಆದರೆ ಕೆಲವು ಅಬ್‌ಸರ್ವೇಷನ್ಸ್ ಇರುವುದರಿಂದ ಅವನ್ನು ಅಟೆಂಡ್ ಮಾಡುತ್ತಿದ್ದೇನೆ.

Sri RAJA PID NAIK.—May I know what part of the work this amount of Rs. 50 lakhs will cover ?

Sri D. PARAMESWARAPPA.—We have provided Rs. 1 crore this year. The amount has been distributed as follows :

Constructing concrete spill way dam from Ch. 56 to 79.90 and masonry non-spillway dam from Ch. 48 to 56 and 79.90 to 108.00 including foundation treatment etc., at Narayanpur site. The estimated cost is Rs. 697 lakhs (put to tender). The last date for receipt of tenders is 24-11-1968.

Constructing earth dam at Narayanpur left bank, Ch. 4 to 48. The estimated cost put to tender is 44.42 lakhs. The last date for receipt of tenders is 30-11-1968.

Constructing earth dam at Narayanapur right bank, Ch. 108 to 168. The estimated cost is Rs. 195.02 lakhs as put to tender. The last date for receipt of tenders is 30-11-1968.

Constructing Narayanpur Left Bank Canal from 0 to 10 miles. The estimated cost is put to tender is Rs. 319.62 lakhs. The last date for receipt of tender is 14-11-1968.

ಶ್ರೀ ಎಸ್. ಎಂ. ಗುರೆಡ್ಡಿ.—ಟೆಂಡರ್ಸ್ ಕರೆದಿರುವ ದನ್ನು ಅಕ್ಸೆಪ್ಟ್ ಮಾಡಿಕೊಳ್ಳಲು ತಾವು ನಿಧಾನಮಾಡುತ್ತಿದ್ದೀರಾ ಅಥವ ಹಣದ ಅಭಾವದಿಂದ ನಿಧಾನಮಾಡುತ್ತಿದ್ದೀರಾ ಅಥವ ಕಂಟ್ರಾಕ್ಟರ ತಪ್ಪಿನಿಂದ ನಿಧಾನವಾಗುತ್ತಿದೆಯೋ ?

ಶ್ರೀ ಡಿ. ಪರಮೇಶ್ವರಪ್ಪ.—ಇದರಲ್ಲಿ ಯಾವುದೂ ನಿಜವಲ್ಲ.

ಶ್ರೀ ಎಂ. ನಾಗಪ್ಪ.—1186.43 ಲಕ್ಷ ರೂಪಾಯಿಗಳಿಗೆ ಟೆಂಡರ್ ಕರೆದಿದೆ. ಈಗ ಒದಗಿಸಿರುವುದು 1 ಕೋಟಿ ರೂಪಾಯಿ. ಈ ದೃಷ್ಟಿಯಿಂದ ಅನೇಕ ಟೆಂಡರುಗಳನ್ನು ಕರೆದಿರುವುದನ್ನು ಲೆಕ್ಕ ಹಾಕಿದರೆ ಈಗಿರುವ ಕೆಲಸಮಾಡಲು 11 ವರ್ಷವಾಗಬಹುದು. ಇದಲ್ಲದೆ 1967—68 ರಲ್ಲಿ ಕೊಟ್ಟ 50 ಲಕ್ಷದಲ್ಲಿ ಬರೀ ಸಿಬ್ಬಂದಿಗೇ ಬಹಳ ಖರ್ಚಾಗಿದೆ, ಈ ಸಾರಿ 50 ಲಕ್ಷ ಖರ್ಚು ಮಾಡಿಲ್ಲ. ಇದನ್ನು ಈಗ ಖರ್ಚು ಮಾಡಿ ಪೂರ್ಣ ಮಾಡುವ ಉದ್ದೇಶವಿದೆಯೇ ? ಇದ್ದರೆ 1186.43 ಲ ಕ್ಕೆ ಟೆಂಡರು ಕರೆದಿರುವಂತೆ ಅಷ್ಟು ಹಣವನ್ನು ಒದಗಿಸಿ ಈ ವರ್ಷ ಸಂಪೂರ್ಣವಾಗಿ ಅದನ್ನು ಉಪಯೋಗಮಾಡುವುದಕ್ಕೆ ವ್ಯವಸ್ಥೆಮಾಡುತ್ತೀರಾ ?

Sri D. PARAMESHWARAPPA.—The amount allotted is rather insufficient. But I request the hon. Member not to entertain any apprehension about this. We will finance this project as and when the work is taken up.

Sri SIDDIAH KASIMATH.—May I know the amount that has been spent for this work?

Sri D. PARAMESHWARAPPA.—I have no information about the amount spent on this.

ಶ್ರೀ ಬಾಪುಗೌಡ.—ಸರ್ಕಾರದವರು ಉದ್ದೇಶ ಪೂರ್ವಕವಾಗಿ ಚೆಂಡರ್ ಕರೆದು ನಮಯೋ ಚಿತವಾಗಿ ತೆಗೆದುಕೊಳ್ಳಬೇಕಾದ ಕಾರ್ಯಕ್ರಮವನ್ನು ತೆಗೆದುಕೊಳ್ಳದೆ, ಡಿಲೇ ಮಾಡಿ ಈ ಡ್ಯಾಂ 1969—70ರಲ್ಲಿ ಕನ್‌ಸ್ಟ್ರಕ್ಷನ್‌ಗೆ ತೆಗೆದುಕೊಳ್ಳರಾರದಂತಹ ಪರಿಸ್ಥಿತಿ ಕಾಣುವುದಿಲ್ಲವೇ?

Sri D. PARAMESWARAPPA.—The intention of the Government is to take up simultaneously the construction of the dam also. Shortly it will be decided.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಇದಕ್ಕೆ 50 ಲಕ್ಷ ರೂಪಾಯಿ ಪ್ರೊವೈಡ್ ಮಾಡಿದೆ ಎಂದು ಹೇಳುತ್ತೀರಿ. ಈ ರೀತಿ ಆದರೆ 20 ವರ್ಷವಾದರೂ ಈ ಕೆಲಸ ಮುಗಿಯುವುದಿಲ್ಲ, ಸಾಕಾದಷ್ಟು ಹಣ ದೊರೆಯುವವರೆಗೂ ಇದನ್ನು ಏಕೆ ಮುಂದೂಡಬಾರದು?

ಶ್ರೀ ಡಿ. ನರಮೇಶ್ವರಪ್ಪ.—1968—69ರಲ್ಲಿ ಅಷ್ಟು ಹಣ ಪ್ರೊವೈಡ್ ಮಾಡಿದ್ದಾರೆ.

ಶ್ರೀ ನದಾಶಿವಪ್ಪ ಪಾಟೀಲ್.—50 ಲಕ್ಷ ರೂಪಾಯಿ ಆಗಲಿ. ಒಂದು ಲಕ್ಷ ರೂಪಾಯಿ ಆಗಲಿ ಯಾವ ಪ್ರಾಜೆಕ್ಟ್‌ಗೆ ಹಣ ಒದಗಿಸಿರುತ್ತಾರೋ ಅದನ್ನು ಎಸ್ಟ್ಯಾಬ್ಲಿಷ್‌ಮೆಂಟು ಮತ್ತು ಇನ್ನಿತರ ಖರ್ಚುಗಳಿಗೆ ಉಪಯೋಗ ಮಾಡಲಕ್ಕೆ ಬರುತ್ತದೆಯೇ?

ಶ್ರೀ ಡಿ. ಪರಮೇಶ್ವರಪ್ಪ.—ಯಾವ ಯಾವ ಐಟಂಗಳಿಗೆ ಎಷ್ಟೆಷ್ಟು ಹಣ ಇಟ್ಟಿರುತ್ತದೆಯೋ ಅದನ್ನು ಅದೇ ಉದ್ದೇಶಕ್ಕೆ ಉಪಯೋಗಿಸುತ್ತೇವೆ, ಬೇರೆ ಉದ್ದೇಶಕ್ಕೆ ಉಪಯೋಗಿಸುವುದಿಲ್ಲ.

ಶ್ರೀ ಬಾಪುಗೌಡ.—ಬಂದಂತಹ ಚೆಂಡರ್‌ಗಳನ್ನು 9 ತಿಂಗಳಿನವರೆಗೂ ನಿಲುವಳಿ ಮಾಡಿದ ಕಾರಣವೇನು?

Sri D. PARAMESWARAPPA.—I have already said that there are some observations and they are being attended to. Shortly we are going to decide.

Sri M. NAGAPPA.—What are the observations?

Sri D. PARAMESWARAPPA.—Let him put a separate question, I will answer it.

Irrigation Dam Work taken up across Dandavathi River in Sorab Taluk

717. Sri S. BANGARAPPA (Sorab).—

Will the Chief Minister be pleased to state :—

(*a*) whether Government has undertaken the irrigation dam work across Dandavathi river near Kuppagadde village, Sorab Taluk, Shimoga district;

(*b*) the estimated cost of the same;

(*c*) when the work would be taken up;